# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 491
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 14.08.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯ ಕಾಲುವೆ ಹಾಗೂ ಉಪ ಕಾಲುವೆಗಳ ದುರಸ್ತಿಯ ಹಾಗೂ ಹೂಳು ತೆಗೆಯುವ ಕೆಲಸಗಳು ಅನೇಕ ವರ್ಷಗಳಿಂದ ಅನುದಾನದ ಕೊರತೆಯಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಕಾಲುವೆ ಮತ್ತು ನಾಲಾಗಳ ದುರಸ್ಥಿ ಹಾಗೂ ನಿರ್ವಹಣೆಗಾಗಿ ಪ್ರತಿವರ್ಷ 2701 ಲೆಕ್ಕ ಶೀರ್ಷಿಕೆಯಡಿ ಅನುದಾನ ಒದಗಿಸಲಾಗುತ್ತಿದೆ. ಸದರಿ ಅನುದಾನದಲ್ಲಿ ಅಣೆಕಟ್ಟು ನಿರ್ವಹಣೆ, ಮಾನವ ಸಂಪನ್ಮೂಲ, ಕಾಲುವೆಯಿಂದ ಹೂಳು ತೆಗೆಯುವ ಕಾಮಗಾರಿ ಹಾಗೂ ಕಾಲುವೆಯ ದುರಸ್ತಿ ಕಾಮಗಾರಿಗಳನ್ನು ಆದ್ಯತೆಯನುಸಾರ ತೆಗೆದುಕೊಳ್ಳಲಾಗುತ್ತಿದೆ.<br><br>ಕರ್ನಾಟಕ ನೀರಾವರಿ ನಿಗಮದಿಂದ ಕೊಪ್ಪಳ ಜಿಲ್ಲೆಯಲ್ಲಿನ ಯೋಜನೆಗಳಿಗೆ ಕಳೆದ 03 ವರ್ಷಗಳಲ್ಲಿ ಲೆಕ್ಕಶೀರ್ಷಿಕೆ 4701/ 2701 ರಡಿ ಯೋಜನಾವಾರು ನೀಡಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಪ್ರತಿವರ್ಷ ನೆರೆ, ಬರದ ಹೊಣೆ, ರೈತರ ಮೇಲೆ ಇಡಲಾಗುತ್ತಿದೆ. ಆದರೆ ಕಾಲುವೆಗಳನ್ನು ಶುದ್ದಗೊಳಿಸಲು ಮತ್ತು ದುರಸ್ತಿಗಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು; (ವಿವರ ಒದಗಿಸುವುದು) | |
| ಇ) | 2023 ರಿಂದ ಕಾಲುವೆ ನಿರ್ವಹಣೆಗೆ ಶಾಶ್ವತ ಅನುದಾನ ಬಿಡುಗಡೆಯಾಗದೆ ಯೋಜನೆಗಳಿವೆ, ನಕ್ಷೆಗಳು ಇವೆ, ಆದರೆ ಹಣವಿಲ್ಲ. ಈ ಜವಾಬ್ದಾರಿತನದ ಹೊಣೆ ಯಾರದು; (ವಿವರ ನೀಡುವುದು) | |
| ಈ) | ಕೊಪ್ಪಳ ಜಿಲ್ಲೆಯ ಹಲವು ಹಳ್ಳಿಗಳು ನೀರಾವರಿ ಇಲ್ಲದೆ ರೈತರು ಭಾರಿ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ ವಿಜಯನಗರ ಕಾಲುವೆಗಳು, ತುಂಗಭದ್ರಾ ಎಡದಂಡೆ ಕಾಲುವೆ, ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆ ಮತ್ತು ಹಿರೇಹಳ್ಳ ಯೋಜನೆಗಳಡಿಯಲ್ಲಿ ಸುಮಾರು 61235 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br>ಮುಂದುವರೆದು, ಸಿಂಗಟಾಲೂರು ಏತ ನೀರಾವರಿ ಯೋಜನೆ, ಅಳವಂಡಿ-ಬೆಟಗೇರಿ ಏತ ನೀರಾವರಿ ಮತ್ತು ಬಹದ್ದೂರು ಬಂಡಿ ಏತ ನೀರಾವರಿ ಯೋಜನೆಗಳಿಂದ ಒಟ್ಟಾರೆ 39605.00 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಅಲ್ಲದೆ, ಕೊಪ್ಪಳ ಏತ ನೀರಾವರಿ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಗಂಗಾವತಿ ಮತ್ತು ಯಲಬುರ್ಗಾ ತಾಲ್ಲೂಕುಗಳ 95,196 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.<br>ಕೊಪ್ಪಳ ಜಿಲ್ಲೆಯಲ್ಲಿ ದೇವಲಾಪುರ ಕೆರೆ ತುಂಬಿಸುವ ಯೋಜನೆ, ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆ ಹಾಗೂ ಇಂದರಗಿ ಕೆರೆ ತುಂಬಿಸುವ ಯೋಜನೆಗಳನ್ನು ಕೆರೆ ತುಂಬಿಸುವ ಮತ್ತು ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿದೆ. |
| ಉ) | ನೀರಾವರಿ ಇಲಾಖೆಯಿಂದ ನಿರ್ವಹಣಾ ಪ್ರಸ್ತಾವಗಳ ಪಟ್ಟಿ ಇದ್ದರೂ ಕೂಡ ಹಣ ಇಲ್ಲದೆ ಕಡತಗಳಲ್ಲಿ ಕೊಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ ಕ್ರಮಗಳೇನು? (ವಿವರ ಒದಗಿಸುವುದು) | |

ಜಸಂಇ 102 ಎಂಎಲ್ಎ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

**ಅನುಬಂಧ**

**ಕಳೆದ 3 ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ-4701 ಮತ್ತು 2701ರಡಿ ನೀಡಿರುವ ಅನುದಾನದ ವಿವರಗಳು**

| ಯೋಜನೆ | ಲೆಕ್ಕಶೀರ್ಷಿಕೆ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| **2022-23** | | |
| ಸಿಂಗಟಾಲೂರು ಏತ ನೀರಾವರಿ ಯೋಜನೆ | 4701 | 1666.00 |
| | 2701 | 0.00 |
| ಹಿರೇಹಳ್ಳ ಯೋಜನೆ | 4701 | 91.50 |
| | 2701 | 103.47 |
| ವಿಜಯನಗರ ಕಾಲುವೆಗಳ ಯೋಜನೆ | 4701 | 4510.00 |
| | 2701 | 7.00 |
| ತುಂಗಭದ್ರಾ ಎಡದಂಡೆ ಯೋಜನೆ | 4701 | 828.55 |
| | 2701 | 1100.00 |
| ಅಳವಂಡಿ-ಬೆಟಗೇರಿ ಏತ ನೀರಾವರಿ ಯೋಜನೆ | 4701 | 800.00 |
| ಬಹದ್ದೂರು ಬಂಡಿ ಏತ ನೀರಾವರಿ ಯೋಜನೆ | 4701 | 300.00 |
| ದೇವಲಾಪುರ ಕೆರೆ ಯೋಜನೆ | 4701 | 400.00 |
| ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆ | 4701 | 548.00 |
| **2023-24** | | |
| ಸಿಂಗಟಾಲೂರು ಏತ ನೀರಾವರಿ ಯೋಜನೆ | 4701 | 1666.00 |
| | 2701 | 0.00 |
| ಹಿರೇಹಳ್ಳ ಯೋಜನೆ | 4701 | 0.00 |
| | 2701 | 103.47 |
| ವಿಜಯನಗರ ಕಾಲುವೆಗಳ ಯೋಜನೆ | 4701 | 9459.00 |
| | 2701 | 0.00 |
| ತುಂಗಭದ್ರಾ ಎಡದಂಡೆ ಯೋಜನೆ | 4701 | 475.70 |
| | 2701 | 1150.00 |
| ಅಳವಂಡಿ-ಬೆಟಗೇರಿ ಏತ ನೀರಾವರಿ ಯೋಜನೆ | 4701 | 485.00 |
| ಬಹದ್ದೂರು ಬಂಡಿ ಏತ ನೀರಾವರಿ ಯೋಜನೆ | 4701 | 1000.00 |
| ದೇವಲಾಪುರ ಕೆರೆ ಯೋಜನೆ | 4701 | 400.00 |
| ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆ | 4701 | 400.00 |
| **2024-25** | | |
| ಸಿಂಗಟಾಲೂರು ಏತ ನೀರಾವರಿ ಯೋಜನೆ | 4701 | 1351.00 |
| | 2701 | 35.00 |
| ಹಿರೇಹಳ್ಳ ಯೋಜನೆ | 4701 | 286.00 |
| | 2701 | 0.00 |
| ವಿಜಯನಗರ ಕಾಲುವೆಗಳ ಯೋಜನೆ | 4701 | 638.00 |
| | 2701 | 0.00 |
| ತುಂಗಭದ್ರಾ ಎಡದಂಡೆ ಯೋಜನೆ | 4701 | 173.30 |
| | 2701 | 900.00 |
| ಅಳವಂಡಿ-ಬೆಟಗೇರಿ ಏತ ನೀರಾವರಿ ಯೋಜನೆ | 4701 | 23.00 |
| ಬಹದ್ದೂರು ಬಂಡಿ ಏತ ನೀರಾವರಿ ಯೋಜನೆ | 4701 | 213.00 |
| ದೇವಲಾಪುರ ಕೆರೆ ಯೋಜನೆ | 4701 | 0.000 |
| ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆ | 4701 | 50.00 |
| ಇಂದರಗಿ ಕೆರೆ ತುಂಬಿಸುವ ಯೋಜನೆ | 4701 | 1188.00 |